# ಊರಿಗೆ ಬಂದ ಜಾದೂಗಾರ

**■ ಅಮೃತೇಶ್ವರ ತಂಡರ ಅಣ್ಣಿಗೇರಿ**

ಊರಿಗೆ ಬಂದನು ಜಾದೂಗಾರ
ಮಕ್ಕಳನೆಲ್ಲಾ ರಂಜಿಸಲು
ಕೊಳಲನ್ನೂದುತ ಕೋಲನು ತಿರುವುತ
ಗಾರುಡಿ ವಿದ್ಯೆಯ ತೋರಿಸಲು

ಕಣ್ಣನು ಮುಚ್ಚಿ ಮಂತ್ರವ ಜಪಿಸಿ
ಮಾಡುವನೇನೊ ಕೈ ಚಳಕ
ಇಲ್ಲದ್ದನ್ನು ಸೃಷ್ಟಿಯ ಮಾಡಿ
ತೋರಿಸಿದಾಗ ಮೈ ಪುಳಕ

ಖಾಲಿ ಜೇಬಲಿ ಕೈಯನು ಹಾಕಿ
ಲಾಲಿಪಾಪನು ತೆಗೆಯುವನು
ಗೋಲಿ ಗುಂಡವ ಬಾಯೊಳು ಕಳಿಸಿ
ಕೋಳಿ ಮೊಟ್ಟೆಯ ತೆರೆಯುವನು

ಬರಿಗೈಯಿಂದ ಚಿನ್ನದ ಉಂಗುರು
ಥಟ್ಟನೆ ಸೃಷ್ಟಿಸಿ ಬಿಡುವವನು
ಕಾಣದ ಚಂಡನು ಕೈಯೊಳುಕೊಟ್ಟು
ಬಾಲರ ಮನಸನು ಗೆಲ್ಲುವನು

ಆಗಸದತ್ತ ಕೋಲನು ಬೀಸಿ
ನಾಣ್ಯದ ಮಳೆಯನು ಸುರಿಸುವನು
ಆರಿಸಿಕೊಳ್ಳಲು ಹೋದರೇ ಸಾಕು
ಕಾಣದ ಹಾಗೆ ಮಾಡುವನು

ಹಕ್ಕಿಯ ಹಿಡಿದು ಮೇಲಕೆ ತೂರಿ
ಬೆಕ್ಕಿನ ಮರಿಯ ಮಾಡುವನು
ಕೊಕ್ಕರೆ ಸಿಕ್ಕರೆ ಅಕ್ಕರೆಯಿಂದ
ಸಕ್ಕರೆ ಬೊಂಬೆಯ ಮಾಡುವನು

ವಾರಕ್ಕೊಮ್ಮೆ ಬರುವಾ ಈತನು
ಏನನು ಬಯಸನು ಯಾರಿಂದ
ಚಿಣ್ಣರ ಕಣ್ಮನ ಅರಳಿಸುವಲ್ಲಿ
ದೊರೆವುದು ಇವನಿಗೆ ಆನಂದ

ಗುನು ಗುನು ಗುಟ್ಟುತ, ಏನೋ ಗುಣಿಸುತ
ಮುಂದಿನ ಊರನು ಸೇರುವನು
ಮಗುವಿನ ಮುಖದಲಿ ನಗುವನು ಕಂಡು
ನೆಮ್ಮದಿಯನ್ನು ಪಡೆಯುವನು



ಮಂಜುನಾಥ ಹುಲಕೊಪ್ಪದ

# ಪುಟ್ಟ ತಂಗಿಯ ದಿವಸ

**■ ಗಣಪತಿ ದಿವಾಣ**

ನಮ್ಮ ಮನೆಯಲೊಬ್ಬ ಪುಟ್ಟ ತಂಗಿ ಇರುವಳು
ಸ್ಲೇಟು ಬಳಪ ಹಿಡಿದು ಅರಸ ಆನೆ ಬರೆವಳು
ಗಲ್ಲಗಲನೆ ಗೆಜ್ಜೆ ಸದ್ದು ಮಾಡಿ ನಡೆವಳು
ನಾಯಿಮರಿಯ ಹಾಡ ಹೇಳಿ ನಲಿಯುತಿರುವಳು

ಶಾಲೆಗೆಂದು ಆಸೆಯಿಂದ ಬ್ಯಾಗು ತರುವಳು
ಕೊರಳಿಗೆ ಬಣ್ಣದ ಥರಮಸವ ತೊಡುವಳು
ಕೊಡೆಯ ಬಿಟ್ಟು ನಡೆಯಲವಳು ಎಂದು ಒಪ್ಪಳು
ಮಳೆಯು ಬಂದರದನು ಇಟ್ಟು ಬರಿದೆ ನೆನೆವಳು

ಆಟವೆಂದರಲ್ಲಿ ಮತ್ತೆ ಹಾಜರಿರುವಳು
ಊಟ ತಿಂಡಿ ನಿದ್ರೆಯನ್ನು ಬಿಟ್ಟುಬಿಡುವಳು
ಅಪ್ಪ ಅಮ್ಮ ಬೈದರಾಗ ಅತ್ತುಬಿಡುವಳು
ಚಾಕಲೇಟು ನೆನಪು ಕೊಟ್ಟರಾಗ ನಗುವಳು

ಕಣ್ಣ ತುಂಬ ಮಂದಹಾಸ ತೋರುತಿರುವಳು
ಮುದ್ದುಮಾಡಿ ಹಿಂಡುವಾಸೆ ನಮಗೆ ಕೊಡುವಳು
ಎತ್ತಿ ಹಿಡಿಯುವಂತೆ ಮತ್ತೆ ಕಾಡುತಿರುವಳು
ಖುಷಿಯ ತುಂಬಿ ಬೊಗಸೆಯಲ್ಲಿ ಸುರಿಯುತಿರುವಳು

ಪುಟ್ಟ ತಂಗಿ ನೀನು ಚಂದ ಕಲಿಯಬೇಕು
ಅರಸ ಆನೆ ಪಾಠ ಜೋರು ಓದಬೇಕು
ಎಲ್ಲ ತಿಳಿದು ದೊಡ್ಡ ಕೆಲಸ ಮಾಡಬೇಕು
ಮನೆಯ ಮನವ ಜಗವನೆಲ್ಲ ಬೆಳಗಬೇಕು



ಗಣೇಶ್ ಅರಳಿಕಟ್ಟೆ